

ದಸರಾ ಆಚರಣೆ ವೇಳೆ ರಾಜಾಶ್ವದ ಮೇಲೆ ಕುಳಿತ ಜಯಚಾಮರಾಜ ಒಡೆಯರ್

# ನೂರರ ತೇಜದಲ್ಲಿ ಜಯಚಾಮರಾಜ

ಆಧುನಿಕ ಕರ್ನಾಟಕದ ರೂವಾರಿಗಳಲ್ಲಿ ಒಬ್ಬರಾದ ಜಯಚಾಮರಾಜ ಒಡೆಯರ್, ನಾಡೊಂದರ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾದ ಸವಲತ್ತುಗಳನ್ನು ಒದಗಿಸಿದ ದಾರ್ಶನಿಕ ರಾಜ. ಜುಲೈ 18ಕ್ಕೆ ಅವರು ಜನಿಸಿ 100 ವರ್ಷ.

■ ಜಗನ್ನಾಥ ಪ್ರಕಾಶ್ ಎನ್.

ಮೈಸೂರು ಮಹಾರಾಜರು ಎಂದಕೂಡಲೆ ಈಗಿನ ತಲೆಮಾರಿನ ಎಲ್ಲರ ಸ್ಮೃತಿಪಟಲದಲ್ಲಿ ಮೂಡಿ ಬರುವ ಚಿತ್ರ ಜಯಚಾಮರಾಜ ಒಡೆಯರ್ ಅವರದು. ತಮ್ಮ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತೆ ಜನಾನುರಾಗಿಯಾಗಿದ್ದ ಜಯಚಾಮರಾಜ ಒಡೆಯರ್ ಅವರಿಗೆ ಈಗ ಜನ್ಮ ಶತಮಾನೋತ್ಸವ ವರ್ಷ (18 ಜುಲೈ 1919 – 23 ಸೆ. 1974).

ಸ್ವಾತಂತ್ರ್ಯಾನಂತರ 'ಮೈಸೂರು ಸಂಸ್ಥಾನ' ಭಾರತ ಒಕ್ಕೂಟವನ್ನು ಸೇರಲು ಒಪ್ಪಿಗೆ ಕೊಟ್ಟ ಜಯಚಾಮರಾಜ ಒಡೆಯರ್ ಮೈಸೂರು ಸಂಸ್ಥಾನದ ಕೊನೆಯ ದೊರೆ.

ರಾಜಮನೆತನದ ಪ್ರತ್ಯೇಕ ಶಾಲೆಯಲ್ಲಿ ಓದಿದರೂ ಕಾಲೇಜು ವ್ಯಾಸಂಗವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಎಲ್ಲರ ಜತೆ ಓದಿ ಬಿ.ಎ. ಪದವಿಯಲ್ಲಿ ಐದು ಬಹುಮಾನಗಳನ್ನು ಪಡೆದ ಜಯಚಾಮರಾಜರ ಆಸಕ್ತಿಯ ಕ್ಷೇತ್ರಗಳು ತತ್ವಶಾಸ್ತ್ರ ಹಾಗೂ ಸಂಗೀತ. ದೇಶದ ತುಂಬೆಲ್ಲ ಸ್ವಾತಂತ್ರ್ಯ ಸಮರ ನಡೆದಿದ್ದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಜನಪರ ಯೋಜನೆಗಳನ್ನು ಸದ್ದಿಲ್ಲದೆ ಅನುಷ್ಠಾನಕ್ಕೆ ತರಲು ಶ್ರಮಿಸಿದ್ದ ಒಡೆಯರ್ ಅವರು ಯಾವಾಗಲೂ ಪ್ರಜಾಹಿತ ಬಯಸುತ್ತಿದ್ದ ರಾಜ.

ಎರಡನೇ ಮಹಾಯುದ್ಧದ ಸಂದರ್ಭ, ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ